# ಹತ್ತನೇ ತರಗತಿ ಸಮಾಜ ವಿಜ್ಞಾನ ಮಾದರಿ ಪ್ರಶ್ನಾ ಪತ್ರಿಕೆ-10

ಅ. ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಸೂಕ್ತವಾದುದನ್ನು ಉತ್ತರಿಸಿರಿ.1*10=10

1.ಸ್ವತಂತ್ರ ಭಾರತದ ಮೊದಲ ವಿವಿದೋದ್ಧೇಶ ನದಿ ಕಣಿವೆ ಯೋಜನೆ _______

A. ಬಾಕ್ರಾ ನಂಗಲ್ ಯೋಜನೆ
B. ಹಿರಾಕುಡ್ ಯೋಜನೆ
C. ತುಂಗಭದ್ರಾ ಯೋಜನೆ
D. ದಾಮೋದರ ನದಿ ಕಣಿವೆ ಯೋಜನೆ

2.ಮಾನವ ಅಭಿವೃಧ್ಧಿ ಸೂಚಿಯು ಈ ಕೆಳಗಿನವುಗಳಲ್ಲಿ ಯಾವುದನ್ನು ಪರಿಗಣಿಸಿಲ್ಲ________

A. ನಿರೀಕ್ಷಿತ ಜೀವಿತಾವದಿ
B. ಲಿಂಗಾನುಪಾತ
C. ತಲಾ ಆದಾಯ
D. ಶೈಕ್ಷಣಿಕ ಮಟ್ಟ

3. ಬ್ಯಾಂಕ್ ನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ _______

A. ಉಳಿತಾಯ ಖಾತೆ
B. ಆವರ್ತಖಾತೆ
C. ಚಾಲ್ತಿ ಖಾತೆ
D. ನಿಶ್ಚಿತ ಠೇವಣಿ ಖಾತೆ

4.ಬಿಳಿ ಕ್ರಾಂತಿಯ ಪಿತಾಮಹ _______

A. ಅಜೀಂ ಪ್ರೇಮ್ ಜಿ
B. ವರ್ಗೀಸ್ ಕುರಿಯನ್
C. ನಾರಾಯಣ ಮೂರ್ತಿ
D. ನರೇಶ್ ಗೋಯೆಲ್

5.ಎ" ಪಟ್ಟಿಯಲ್ಲಿರುವ ಅಂಶಗಳಿಗೆ "ಬಿ" ಪಟ್ಟಿಯಲ್ಲಿರುವ ಅಂಶಗಳು ಸರಿ ಹೊಂದುವ ಗುಂಪು ಯಾವುದು__-

| | |
|---|---|
| 1. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ | ಎ. ಮತೀಯ ಾಧಾರದ ಚುನಾವಣೆ |
| 2. ಸಹಾಯಕ ಸೈನ್ಯ ಪಧ್ಧತಿ | ಬಿ. ರೆಗ್ಯುಲೇಟಿಂಗ್ ಶಾಸನ |
| 3. 1935ರ ಭಾರತ ಸರ್ಕಾರದ ಕಾಯಿದೆ. | ಸಿ. ಲಾರ್ಡ್ ವೆಲ್ಲೆಸ್ಲಿ |
| 4. ಮಿಂಟೋ ಮಾರ್ಲೆ ಸುಧಾರಣೆ | ಡಿ. ಸಂಯುಕ್ತ ರಾಜ್ಯ ಪಧ್ಧತಿ |

ಉತ್ತರಗಳು :

1) 1-ಡಿ,2-ಎ,3-ಬಿ,4-ಸಿ
2) 1-ಎ,2-ಬಿ,3-ಸಿ,4-ಡಿ
3) 1-ಬಿ,2-ಸಿ,3-ಡಿ,4-ಎ
4) 1-ಸಿ,2-ಡಿ,3-ಎ,4-ಬಿ

6.ರಾಜ್ಯ ಪುನರ್ವಿಂಗಡನಾ ಕಾಯ್ದೆ ಜಾರಿಗೆ ಬಂದ ವರ್ಷ ___________

A. 1961
B. 1952
C. 1956
D. 1950

7. 1971 ರ ಭಾರತ ಪಾಕಿಸ್ತಾನ ಯುಧ್ಧದಲ್ಲಿ ಭಾರತ ಜಯಗಳಿಸಿದ ಪರಿಣಾಮ ______

A. ಭಾಂಗ್ಲಾ ದೇಶದ ಉದಯ
B. ಟಿಬೇಟ್ ನ ಆಕ್ರಮಣ
C. ಭಯೋತ್ಪಾದನೆ ಹೆಚ್ಚಳ
D. ನೀರಿನ ವಿವಾದ

8.ಭಾರತದಲ್ಲಿ ಸ್ತ್ರೀ ಪುರುಷರ ಲಿಂಗಾನುಪಾತದಲ್ಲಿ ಏರುಪೇರು ಕಂಡುಬರಲು ಕಾರಣ _________

A. ಹೆಣ್ಣು ಭ್ರೂಣ ಹತ್ಯೆ
B. ವರದಕ್ಷಿಣೆ
C. ಬಡತನ
D. ಕೋಮುವಾದ

9.ಮಕ್ಕಳ ಕ್ಷೇಮಾಭಿವೃಧ್ಧಿಗಾಗಿ ಶ್ರಮಿಸುವ ವಿಶ್ವ ಸಂಸ್ಥೆಯ ಸಂಘ ಸಂಸ್ಥೆ _________

A. ಯುನೆಸ್ಕೋ
B. ಯುನಿಸೆಫ್
C. ವಿಶ್ವ ಆರೋಗ್ಯ ಸಂಸ್ಥೆ
D. ಐ.ಎಮ್ .ಎಫ್

10.ಭಾರತದಲ್ಲಿ ಅತೀ ಹೆಚ್ಚು ಭತ್ತ ಬೆಳೆಯುವ ರಾಜ್ಯ _______

A. ಕರ್ನಾಟಕ
B. ಪಂಜಾಬ್
C. ಪಶ್ಚಿಮ ಬಂಗಾಳ
D. ಉತ್ತರಪ್ರದೇಶ

ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. 1*14=14

1. ಬಳ್ಳಾರಿ ಪ್ರದೇಶದ ಜನ ಸಾಮಾನ್ಯರಲ್ಲಿ ಕೃಷ್ಣ ದೇವರಾಯನಿಗಿಂತ ಹೆಚ್ಚು ಜನಜನಿತವಾಗಿರುವವರು ಯಾರು?
2. ರಾಜಾರಾಮ್ ಮೋಹನ್ ರಾಯ್ರು ಆರಂಭಿಸಿದ ವಾರ ಪತ್ರಿಕೆ ಯಾವುದು?
3. ರಾಷ್ಟ್ರಿಯ ಮತ್ತು ಸರ್ಬಿಯಾ ದೇಶದ ನಡುವೆ ತಕ್ಷಣ ಬಿಕ್ಕಟ್ಟನ್ನು ಸೃಷ್ಟಿಸಿದ ಘಟನೆ ಯಾವುದು.?
4. ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ ಎನಿಸಿದೆ. ಯಾಕೆ?
5. ಯುನಿಸೆಫ್ ಕಾರ್ಡುಗಳನ್ನು ಪ್ರತಿಯೊಬ್ಬರು ಕೊಳ್ಳಲೇ ಬೇಕು.ಯಾಕೆ?
6. ಕಾನೂನಿನ ಹೊರತು ವರದಕ್ಷಿಣೆ ಪಿಡುಗನ್ನು ಹೇಗೆ ನಿವಾರಿಸಬಹುದು?
7. ಹಿಮಾಲಯದ ಪಾದ ಬೆಟ್ಟ ಯಾವುದು?
8. ವ್ಯವಸಾಯ ಎಂದರೇನು?
9. ಶಕ್ತಿ ಸಂಪನ್ಮೂಲದ ಕೊರತೆಯನ್ನು ನೀಗಿಸಲು ನಿಮ್ಮದೇ ಆದ ಸಲಹೆಯನ್ನು ಕೊಡಿ.
10. ಸಕ್ಕರೆ ಕೈಗಾರಿಕೆಗಳು ಗಂಗಾ ನದಿಯ ಮೈದಾನ ಪ್ರದೇಶದಲ್ಲಿ ಸ್ಥಾಪಿತಗೊಂಡಿವೆ. ಯಾಕೆ?
11. ಲಿಂಗಾನುಪಾತವನ್ನು ಕುಸಿಯುದನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?
12. ಆಯವ್ಯಯ ಎಂದರೇನು?
13. ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿಯೆಂದೇ" ಹೆಸರು ಮಾಡಿದವರು ಯಾರು?
14. ಸಂವಿಧಾನದ ಎಷ್ಟನೇ ವಿಧಿಯು ಅಸ್ಪ್ರುಶ್ಯತಾ ಆಚರಣೆಯನ್ನು ತೊಡೆದು ಹಾಕಿದೆ?

ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ಅಂಶಗಳನ್ನು ಉತ್ತರಿಸಿರಿ. 2*15=30

1. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆ ಕಾರಣ . ಈ ಹೇಳಿಕೆಯನ್ನು ಸಮರ್ಥಿಸಿರಿ.
2. ನಾಲ್ಕನೇ ಮೈಸೂರು ಯುಧ್ಧದ ಪರಿಣಾಮಗಳೇನು?
3. ಸ್ವಾಮೀ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು.ಹೇಗೆ?
4. ರಷ್ಯಾದ ಕ್ರಾಂತಿಯಲ್ಲಿ ಲೆನಿನ್ ಪಾತ್ರವನ್ನು ವಿವರಿಸಿರಿ.
5. ಬಡತನ ನಿವಾರಣೆಗೆ ಸರಕಾರ ಕೈಗೊಂಡಿರುವ ಯೋಜನೆಗಳನ್ನು ಹೆಸರಿಸಿರಿ.
6. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?
7. ಪೂರ್ವ ಕರಾವಳಿ ಪಶ್ಚಿಮ ಕರಾವಳಿ ನಡುವೆ ಇರುವ ವ್ಯತ್ಯಾಸ ವೇನು?
8. ಮಣ್ಣಿನ ಸವೆತಕ್ಕೆ ಕಾರಣಗಳೇನು?
9. ಅರಣ್ಯ ಸಂರಕ್ಷಣಾ ವಿಧಾನಗಳನ್ನು ತಿಳಿಸಿ.
10. ಜಿಪಿಎಸ್ ತಂತ್ರಜ್ಞಾನವನ್ನು ನೀವು ಹೇಗೆ ಬಳಸುವಿರಿ.
11. ಚಂಡಮಾರುತದ ಪರಿಣಾಮಗಳಾವುವು?
12. ವಲಸೆ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳ ಬಹುದು?
13. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?
14. ಜಾಗತೀಕರಣದ ಯಾವುದಾದರು ನಾಲ್ಕು ಅನುಕೂಲಗಳನ್ನು ತಿಳಿಸಿ.
15. ಯಾವುದಾದರು ನಾಲ್ಕು ಪರಿಸರ ಸಂರಕ್ಷನಾ ಚಳುವಳಿಯನ್ನು ಹೆಸರಿಸಿರಿ

ಈ. ಕೆಳಗಿನ ಪ್ರಶ್ನೆಗಳಿಗೆ ಆರು ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ. 3*6=18

1.ಭಾರತೀಯ ನಾಯಕರು ಮಾಡಿದ ತಪ್ಪುಗಳಿಂದ 1857ರ ದಂಗೆಯು ಯಶಸ್ವಿಯಾಗಲಿಲ್ಲ. ಈ ಹೇಳಿಕೆಯನ್ನು ಸಮರ್ಥಿಸಿರಿ.

ಅಥವಾ

ಬ್ರಿಟೀಷ್ ಆಡಳಿತದಲ್ಲಿ ನ ಭೂಕಂದಾಯ ವ್ಯವಸ್ಥೆ ಲಾಭದಾಯಕ ಉದ್ದೇಶವನ್ನು ಹೊಂದಿತ್ತು. ಈ ಹೇಳಿಕೆಯನ್ನು ವಿಶ್ಲೇಶಿಸಿ.

2.ಭಾರತ ಹಾಗೂ ಪಾಕಿಸ್ತಾನಗಳ ನಡುವಿನ ಸಂಬಂಧ ಹದಗೆಡುತ್ತಿರುವುದಕ್ಕೆ ಕಾರಣಗಳನ್ನು ಪಟ್ಟಿ ಮಾಡಿ.

ಅಥವಾ

ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳನ್ನು ಪಟ್ಟಿ ಮಾಡಿ.

3. ಅಸ್ಪ್ರುಶ್ಯತಾ ನಿವಾರಣೆಯ ಶಾಸನಾತ್ಮಕ ಕ್ರಮಗಳಾವುವು?

ಅಥವಾ

ಸಂಗಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

4.ಭಾರತದಲ್ಲಿ ರಸ್ತೆ ಸಾರಿಗೆಯ ತೊಡಕುಗಳಾವುವು?

ಅಥವಾ

ಕೃಷಿ ಕ್ಷೇತ್ರದ ಮೇಲೆ ಜೈವಿಕ ತಂತ್ರಜ್ಞಾನದ ಪರಿಣಾಮಗಳು ಯಾವುವು?

5. ಗ್ರಾಮೀಣಾಭಿವೃಧ್ಧಿಗಾಗಿ ಕೈಗೊಳ್ಳ ಬಹುದಾದ ಸರಕಾರದ ವಿವಿಧ ಯೋಜನೆಗಳನ್ನು ತಿಳಿಸಿ.

ಅಥವಾ

ಸಾರ್ವಜನಿಕ ಹಣಕಾಸು ಮತ್ತು ವೈಯ್ಯಕ್ತಿಕ ಹಣಕಾಸು ನಡುವಿನ ಭಿನ್ನತೆಯನ್ನು ತಿಳಿಸಿ.

6. ಬ್ಯಾಂಕುಗಳು ಗ್ರಾಹಕರಿಗೆ ಒದಗಿಸುವ ಸೇವೆಗಳಾವುವು?

ಅಥವಾ

ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳಾವುವು?

ಊ. ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯದಲ್ಲಿ ಉತ್ತರಿಸಿರಿ.4*1=4

ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿ.

ಊ. ಭಾರತದ ನಕಾಶೆಯನ್ನು ಬರೆದು ಇವುಗಳನ್ನು ಗುರುತಿಸಿ. 1+3=4

A. 821/2* ಪೂ.ರೇಖಾಂಶ
B. ಪಂಪಾ ಸಾಗರ
C. ಬಾಂಬೆ ಹೈ

****************************************************************************************************

ಈ ಪ್ರಶ್ನಾ ಪತ್ರಿಕೆಯನ್ನು ತಯಾರಿಸಿದ ಶಿಕ್ಷಕರು :

a. ನಥಾಲಿಯಾ ಡಿ'ಸಿಲ್ವ
b. ಲತಾ ಕ್ರಾಸ್ತಾ
c. ಕವಿತಾ ಎ
d. ಲತಾ.ಯು
e. ಸುಶಿಮ್
f. ಸೀತಾರಾಮ
g. ಅಶೋಕ್ ಕುಮಾರ್
h. ರಾಜಗೋಪಾಲ ಜೋಶಿ
i. ರಾಮಣ್ಣ ಗೌಡ
j. ಜೊಸೆಪ್ ರಿಚರ್ಡ್ ಆಲ್ವರೆಸ್